ಎಂ ವಿ ಸಿ ನಂಃ 390/2024
ಆರ್ ಡಬ್ಲ್ಯು 1

<u>ದಿನಾಂಕಃ**31-10-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಸಿ ವಿ.ಎಸ್.ವಕೀಲರಿಂದಃ</u>

ನಾನು ಕೂಲಿ ಕೆಲಸ ಮಾಡುತ್ತಾ ಇರುತ್ತೇನೆ. ನನಗೆ ಬೈಕ್ ಚಲಾಯಿಸಲು ಬರುವುದಿಲ್ಲ. ಕೀರ್ತಿ ರಾಜ್ ನನಗೆ ಅಣ್ಣ ಇರುತ್ತಾರೆ. ನನ್ನ ಅಣ್ಣ ಎಷ್ಟು ವರ್ಷದಿಂದ ಬೈಕ್ ಚಲಾಯಿಸುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಅಣ್ಣನ ಚಾಲನಾ ಪರವಾನಿಗೆ ಪತ್ರವನ್ನು ನನಗೆ ಯಾರು ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. 2 ನೇ ಎದುರುದಾರ ನನ್ನ ದೊಡ್ಡಪ್ಪನ ಮಗ ಇರುತ್ತಾರೆ. ಆಯುಷ್ ಎನ್ನುವವರು ನನಗೆ ಗೊತ್ತಿರುವುದಿಲ್ಲ. ಆಯುಷ್ ಎನ್ನುವವರು ರಾಜೇಶ್ ಇವರು ಮಗ ಇರುತ್ತಾರೆ ಎಂದರೆ ಸರಿ. ನಾನು ಆಯುಷ್‌ಗೆ ಚಿಕ್ಕಪ್ಪನಾಗಬೇಕು ಎಂದರೆ ಸರಿ. ನನಗೆ ಕೇಶವ ಎನ್ನುವವರ ಪರಿಚಯ ಇರುವುದಿಲ್ಲ.

2. ದಿನಾಂಕ 24.10.2023 ರಂದು ನಾನು ಕೇಶವ ಅವರನ್ನು ಬೈಕಿನ ಹಿಂಬದಿಯಲ್ಲಿ ಕೂರಿಸಿಕೊಂಡು ಸದರಿ ಬೈಕನ್ನು ಅತೀ ವೇಗ ಮತ್ತು ಅಜಾಗುರೂಕತೆಯಿಂದ ಚಾಲನೆ ಮಾಡಿಕೊಂಡು ಹೋದ ಕಾರಣ ಅವರು ಬೈಕಿನಿಂದ ಬಿದ್ದು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕೆಎ-18-ಇಜೆ-0158 ಈ ಬೈಕ್ ಯಾರಿಗೆ ಸೇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಅರ್ಜಿದಾರರು ಸಲ್ಲಿಸಿದ ಅರ್ಜಿಗೆ ತಕರಾರು ಸಲ್ಲಿಸಿ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ಮಾಹಿತಿಯನ್ನು ನಾನು ಒಬ್ಬನೆ ಕೊಟ್ಟಿರುತ್ತೇನೆ. ನನ್ನ ಜೊತೆ ರಾಜೇಶ್ ಬಂದಿರಲಿಲ್ಲ. 2 ನೇ ಎದುರುದಾರರ ಬೈಕ್ ಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಇರುತ್ತದೆ ಎಂಬುದರ ಬಗ್ಗೆ ಯಾರು ವಕೀಲರಿಗೆ ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ತಕರಾರಿನಲ್ಲಿ ಬರೆದ ವಿಚಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

3. ಶೃಂಗೇರಿ ಪೊಲೀಸ್ ಠಾಣೆಯವರು ನನ್ನ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇರುವುದ್ದಿಲ. ನಾನು ಶೃಂಗೇರಿ ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧ ಯಾವತ್ತೂ ಹೋಗಿರುವುದಿಲ್ಲ. ನಾನು ಶೃಂಗೇರಿ ಪೊಲೀಸ್ ಠಾಣೆಯಲ್ಲಾಗಲೀ ಅಥವಾ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಾಗಲೀ ಜಾಮೀನು ಕೊಟ್ಟಿರುವುದಿಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಬಸ್ಸಿನ ಮುಖಾಂತರ ಬಂದಿರುತ್ತೇನೆ. ಈ ದಿನ ನನ್ನ ಜೊತೆ ನ್ಯಾಯಾಲಯಕ್ಕೆ ರಾಜೇಶ್ ಇವರು ಬಂದಿರುವುದಿಲ್ಲ. ನಾನು ಹಾಜರುಪಡಿಸಿರುವ ನಿಆರ್ -5 ಯಾವ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿರುವುದಿಲ್ಲ. ದಿನಾಂಕ 24.10.2023 ರಂದು ನಾನು 2 ನೇ ಎದುರದಾರರಿಗೆ ಸಂಬಂಧಿಸಿದ ಬೈಕಿನಲ್ಲಿ ಕೇಶವ ಇವರನ್ನು ಕೂರಿಸಿಕೊಂಡು ಹೋಗಿ ಅಪಘಾತ

ಪಡಿಸಿದ್ದು ಆ ಕಾಲಕ್ಕೆ ನನಗೆ ಚಾಲನಾ ಪರವಾನಿಗೆ ಪತ್ರ ಇಲ್ಲದಿದ್ದ ಕಾರಣ ಕೀರ್ತಿ ರಾಜ್ ಇವರನ್ನು ಆರೋಪಿಯನ್ನಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಕೀರ್ತಿ ರಾಜ್ ಇವರು ನಮ್ಮ ಪಕ್ಕದ ಮನೆಯಲ್ಲಿ ವಾಸ ಇರುತ್ತಾರೆ. ನಾನು ಮತ್ತು ನನ್ನ ಅಣ್ಣ ಕೀರ್ತಿ ರಾಜ್ ಬೇರೆ ಬೇರೆ ಎಷ್ಟು ವರ್ಷಗಳಿಂದ ವಾಸ ಮಾಡುತ್ತೀರಿ ಎಂದರೆ ಸಾಕ್ಷಿ ಮರೆತು ಹೋಗಿರುತ್ತದೆ ಎಂದು ಉತ್ತರಿಸುತ್ತಾರೆ.

4. ಕೀರ್ತಿ ರಾಜ್ ಇವರಿಗೆ ಮದುವೆ ಆಗಿರುವುದಿಲ್ಲ. ನಮ್ಮ ಮನೆಯಲ್ಲಿ ನಾನು, ನಮ್ಮ ಅಮ್ಮ ಮತ್ತು ನನ್ನ ಅಣ್ಣ ವಾಸ ಇರುತ್ತೇವೆ. ನನ್ನ ತಂದೆಯ ಹೆಸರು ಶಂಕರ ನಾರಾಯಣ ಆಚಾರ್ ಎಂದರೆ ಸರಿ. ಅಪಘಾತ ಆಗುವ ಕಾಲಕ್ಕೆ ನಮ್ಮ ತಂದೆ ಜೀವಂತ ಇರಲಿಲ್ಲ. ನಮ್ಮ ತಂದೆ ತಾಯಿಗೆ ನಾವು ಇಬ್ಬರು ಮಕ್ಕಳಿರುತ್ತಾರೆ. ಅವರುಗಳೆಂದರೆ ನಾನು ಮತ್ತು ನನ್ನ ಅಣ್ಣ ಕೀರ್ತಿ ರಾಜ್ ಇರುತ್ತೇವೆ. ನಾನು, ನನ್ನ ತಾಯಿ ಮತ್ತು ನನ್ನ ಅಣ್ಣ ಒಂದೇ ಮನೆಯಲ್ಲಿ ವಾಸ ಇರುತ್ತೇವೆ ಎಂದರೆ ಸರಿಯಲ್ಲ. ಶೃಂಗೇರಿ ನ್ಯಾಯಾಲಯದಲ್ಲಿ ದೋಷ ಮುಕ್ತನನ್ನಾಗಿ ಯಾವ ಕೇಸ್ ನಲ್ಲಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಅರ್ಜಿದಾರರು ಪೊಲೀಸರ ಮೇಲೆ ಪ್ರಭಾವ ಬೀರಿ ನಮ್ಮ ಮೇಲೆ ಕೇಸು ಹಾಕಿರುತ್ತಾರೆ ಎಂದು ತಕರಾರಿನಲ್ಲಿ ಹೇಳಿದ್ದು ಯಾವ ಕೇಸು ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಈ ಕೇಸಿನ ಬಗ್ಗೆ ಏನು ಮಾಹಿತಿ ಇಲ್ಲದ ಕಾರಣ ನಾನು ಬಂದಿರುತ್ತೇನೆ.

5. ಹಿರೋ ಹೆಚ್.ಎಫ್ ಡಿಲಕ್ಸ್ ಬೈಕ್ ನನ್ನ ಅಣ್ಣ ರಾಜೇಶ್ ಇವರಿಗೆ ಸೇರಿದ್ದು ಎಂದರೆ ಸರಿ. ನಾನು ಮತ್ತು 2 ನೇ ಎದುರುದಾರರು ಉತ್ತಮ ಬಾಂಧವ್ಯ ಹೊಂದಿರುತ್ತೇವೆ ಎಂದರೆ ಸರಿ. ನಾನು ರಾಜೇಶ್ ಇವರ ಕಡೆಯಿಂದ ಅಪಘಾತ ಪಡಿಸಿದ ಬೈಕ್ ನ ಆರ್ ಸಿ ಕಾರ್ಡನ್ನು ಪಡೆದುಕೊಂಡಿರುವುದಿಲ್ಲ. ನಾನು ಹಾಜರುಪಡಿಸಿದ ನಿಆರ್ -1 ನ್ನು ನನ್ನ ವಕೀಲರಿಗೆ ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ವಿರುದ್ದ ಶೃಂಗೇರಿ ನ್ಯಾಯಾಲಯದಲ್ಲಿ ಅಪಘಾತ ಪ್ರಕರಣ ಹೊರತು ಪಡಿಸಿ ಬೇರೆ ಯಾವುದೇ ಕೇಸು ದಾಖಲಾಗಿರುವುದಿಲ್ಲ. ಶೃಂಗೇರಿ ಪೊಲೀಸರು ನನ್ನ ವಿರುದ್ದ ಸಲ್ಲಿಸಿದ ಪ್ರಕರಣದ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಹಾಗೂ ಯಾವುದೇ ಪಿರ್ಯಾದನ್ನು ನೀಡಿರುವುದಿಲ್ಲ.

6. ನನಗೆ ಅರ್ಜಿದಾರರ ಪರಿಚಯ ಇರುವುದಿಲ್ಲ. ಅಪಘಾತ ಆಗುವ ಪೂರ್ವದಲ್ಲಿ ನನಗೆ ಅರ್ಜಿದಾರರ ಪರಿಚಯ ಇರುವುದಿಲ್ಲ. ನನಗೆ ಮೃತ ಕೇಶವ ಈತ ಯಾವ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಿನಾಂಕ 24.10.2023 ರಂದು ನನ್ನ ಬೈಕಿನ ಹಿಂಬದಿಯಲ್ಲಿ ಕೇಶವ ಇವರು ಕುಳಿತುಕೊಂಡಿದ್ದು ನಾನ ಬೈಕನ್ನು ಅತೀ ವೇಗ ಮತ್ತು ಅಜಾಗುರೂಕತೆಯಿಂ ದ ಚಾಲನೆ ಮಾಡಿಕೊಂಡು ಹೋಗಿ ಅಪಘಾತ ಪಡಿಸಿದ ಕಾರಣ ಅವರ

ತಲೆಗೆ ಪೆಟ್ಟಾಗಿದ್ದು ಅವರನ್ನು ಶೃಂಗೇರಿ ಆಸ್ಪತ್ರೆಗೆ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಅವರನ್ನು ಶೃಂಗೇರಿ ಆಸ್ಪತ್ರೆಯಿಂದ ವೆನ್ ಲಾಕ್ ಆಸ್ಪತ್ರೆ ಮಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 25.10.2023 ರಂದು ಕೇಶವ ಇವರು ಅಪಘಾತದಿಂದಾದ ಗಾಯದಿಂದ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕೇಶವ ಇವರು ತೀರಿಕೊಂಡು ಎಷ್ಟು ಸಮಯ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿದ್ದು ನನಗೆ ಚಾಲನ ಪರವಾನಿಗೆ ಪತ್ರ ಇರದ ಕಾರಣ ನನ್ನ ಅಣ್ಣ ಕೀರ್ತಿ ರಾಜ್ ಇವರನ್ನು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಶೃಂಗೇರಿ ಪೊಲೀಸ್ ರವರು ಪ್ರಕರಣ ದಾಖಲಿಸಿರುವ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಎದರುದಾರರ ವಾಹನವನ್ನು ನಾನು ಚಲಾಯಿಸುತ್ತಿದ್ದ ಕಾರಣ ನಾವು ಪರಿಹಾರ ಕೊಡಲು ಬಾಧ್ಯಸ್ಥರು ಇರುತ್ತೇವೆ ಎಂದರೆ ಸರಿಯಲ್ಲ.

7. ಮೃತ ಕೇಶವ ಈತನಿಗೆ ಮಾಸಿಕ ರೂ. 25,000/- ಆದಾಯ ಇಲ್ಲ ಎಂದು ನಾನು ತಕರಾರಿನಲ್ಲಿ ಹೇಳಿದ್ದು ಯಾವ ಕಾರಣಕ್ಕಾಗಿ ಒಪ್ಪುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸತ್ತಾರೆ. ಶೃಂಗೇರಿ ಪೊಲೀಸರು 2 ನೇ ಎದುರುದಾರರ ವಾಹನವನ್ನು ಅಮಾನತುಪಡಿಸಿಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಶೃಂಗೇರಿ ಪೊಲೀಸರು ನನ್ನಿಂದ ಯಾವುದೇ ಹೇಳಿಕೆ ಪಡೆದಿರುವುದಿಲ್ಲ. ಸಾಕ್ಷಿಗೆ ಒಂದು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಮ್ಮ ಸಹಿಯನ್ನು ತೋರಿಸಲಾಗಿ ಸಾಕ್ಷಿ ತಮ್ಮ ಸಹಿ ಎಂದು ಒಪ್ಪಿದ್ದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ತಾವು ಸಲ್ಲಿಸಿದ ತಕರಾರಿನ ಪ್ರತಿ ತೋರಿಸಲಾಗಿ ಸಾಕ್ಷಿ ತಮ್ಮ ತಕರಾರಿನಲ್ಲಿ ಸಹಿ ಎಂದು ಒಪ್ಪಿದ್ದು. ನನ್ನ ತಕರಾರಿನಲ್ಲಿ ಬರೆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಅಜಾಗರೂಕತೆಯಿಂದ ಅಪಘಾತ ಆಗಿ ಕೇಶವ ಇವರು ಮೃತ ಪಟ್ಟ ಕಾರಣ ನಾನು ಪರಿಹಾರ ಕೊಡಲು ಬಾಧ್ಯಸ್ಥರು ಇರುತ್ತೇವೆ ಎಂದರೆ ಸರಿಯಲ್ಲ. 2 ನೇ ಎದುರದಾರರ ವಾಹನಕ್ಕೆ 3 ನೇ ಎದುರುದಾರರು ವಿಮೇ ನೀಡಿದ ಕಾರಣ ನಾವೆಲ್ಲರೂ ಪರಿಹಾರ ಕೊಡಲು ಬಾಧ್ಯಸ್ಥರು ಇರುತ್ತೇವೆ ಎಂದರೆ ಸರಿಯಲ್ಲ. ನಾನು ಪರಿಹಾರ ಕೊಡುವುದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 3 ನೇ ಎದುರುದಾರರ ಪರ ಜೆ ಪಿ ಎಲ್ ವಕೀಲರ ಪರವಾಗಿ ಶ್ರೀಮತಿ ಎಸ್ ಬಿ ವಕೀಲರಿಂದ ಃ</u>

ನಾನು ಆ ದಿನ ಚಲಾಯಿಸುತ್ತಿದ್ದ ವಾಹನ ಸಂಖ್ಯೆ ನನಗೆ ಹೇಳಲು ಗೊತ್ತಿರುವುದಿಲ್ಲ. ಸದರಿ ಬೈಕ್ ಹೀರೋ ಹೆಚ್ ಎಫ್ ಡಿಲಕ್ಸ್ ಬೈಕ್ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಚಲಾಯಿಸುತ್ತಿದ್ದ ಬೈಕ್ ಮಾಲೀಕರು ನನಗೆ ಸಂಬಂಧಿಕರು ಇರುತ್ತಾರೆ. ನಾನು ಮತ್ತು 2 ನೇ ಎದುರುದಾರ ಒಂದೇ ಊರಿನವರು ಇರುತ್ತೇವೆ. ಬೈಕ್ ನೋಂದಾವಣೆ ಆಗುವುದಕ್ಕಿಂತ ಪೂರ್ವದಲ್ಲಿ ವಿಮೇ ನೀಡಲಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವಿಮಾ ಪಾಲಿಸಿ ದಿನಾಂಕ 12.08.2020 ರಿಂದ ದಿನಾಂಕ 11.08.2025 ರವರೆಗೆ ವಿಮೇ ಚಾಲ್ತಿಯಲ್ಲಿತ್ತು ಎಂದರೆ ಗೊತ್ತಿರುವುದಿಲ್ಲ. ಅಪಘಾತ ಆದ ದಿವಸ ಮೃತ ಕೇಶವ ಇವರು ಬೈಕ್ ನ ಹಿಂಬದಿ ಸವಾರರು ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 3 ನೇ ವ್ಯಕ್ತಿಗೆ ಸಂಬಂಧಿಸಿದಂತೆ ಹೆಚ್ಚುವರಿ ಪ್ರೀಮಿಯಮ್ ಕಟ್ಟಿ ವಿಮೇ ಮಾಡಿಸಬೇಕು ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಆ ದಿನ ಬೈಕ್ ಚಲಾಯಿಸಲು ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಬೈಕ್ ಓಡಿಸಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. 3 ನೇ ಎದುರುದಾರರು ಪರಿಹಾರ ಕೋಡಲು ಬಾಧ್ಯಸ್ಥರು ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಪ್ಪಿನಿಂದ ಅಪಘಾತ ಆದ ಕಾರಣ ಪರಿಹಾರ ಕೊಡಲು ನಾನು ಬಾಧ್ಯಸ್ಥರು ಇರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ